## ಕಳಪೆ ಕಾಮಿಡಿ ಶೋ!

ಕಾಮಿಡಿ ಕಿಲಾಡಿಗಳು ಕಾರ್ಯಕ್ರಮದ  ಹೆಸರನ್ನು ದಯವಿಟ್ಟು ಬದಲಾವಣೆ ಮಾಡಿ. 'ವಯಸ್ಕರಿಗಾಗಿ ಕಾಮಿಡಿಗಳು' ಎಂದು ಹೆಸರಿಸಿ. ತೀರ್ಪುಗಾರರ ಬಗ್ಗೆ ಗೌರವವಿದೆ. ಇಂತಹ ಕಳಪೆ ಗುಣಮಟ್ಟದ ಕಾರ್ಯಕ್ರಮಗಳು ತೀರ್ಪುಗಾರರ ಗೌರವಕ್ಕೂ ಧಕ್ಕೆ ತರುವಂತೆ ಇವೆ. ಕಾಮಿಡಿಯೆಂದರೇ ತಿಳಿಹಾಸ್ಯ, ಜೀವನದಲ್ಲಿ ನಮ್ಮ ಸುತ್ತ ಮುತ್ತ ನಡೆಯುವ, ತಿಳಿಯದೇ ಆಗುವ ಘಟನೆಗಳು ನಗು ತರಿಸುತ್ತವೆ. ಅಂತಹವುಗಳನ್ನು ತೋರಿಸಿ. ಅಶ್ಲೀಲ ಕಾಮಿಡಿಗೆ ಬ್ರೇಕ್ ಹಾಕಿ.

—ಸುಮತಿ ಟಿ.ಎನ್. ತಿಪಟೂರು

## ಅತಿರೇಕದ ಪರಮಾವಧಿ

ಯಾಕೊ ಇತ್ತೀಚೆಗೆ ಕಲರ್ಸ್ ಕನ್ನಡ ತುಂಬಾ ಬೇಜಾರೆನಿಸುತ್ತೆ. ಅದೇನೆಂದರೆ ಹೆಣ್ಣುಮಕ್ಕಳನ್ನು ಖಳಾನಾಯಕಿಯರಾಗಿ ತರುವುದು, ಕೊಲೆ, ಕೇಸು ಇತ್ಯಾದಿಗಳಿಂದ ತುಂಬಿ ಕಿರಿಕಿರಿ ಎನ್ನಿಸುತ್ತೆ.

'ಪುಟ್ಟಗೌರಿ'ಯನ್ನಂತೂ ನೋಡುವುದನ್ನೇ ಬಿಟ್ಟಿದ್ದೇನೆ. ಅದೆಷ್ಟು ಸಲ ಸಾಯಿಸುತ್ತಾರೊ, ಅದೆಷ್ಟು ಸಲ ಬದುಕಿಸುತ್ತಾರೊ ನಿರ್ದೇಶಕರಿಗೇ ಗೊತ್ತು. ಇನ್ನು ಮುಂದೆ ಚಿಕ್ಕ ಚಿಕ್ಕ ಧಾರಾವಾಹಿಗಳು ಪ್ರಸಾರವಾಗಲಿ.

ಝೀ ಕನ್ನಡದಲ್ಲಿ ಸರಿಗಮಪ, ಕಾಮಿಡಿ ಕಿಲಾಡಿಗಳು ತುಂಬಾ ಚೆನ್ನಾಗಿ ಬರುತ್ತಿವೆ. ಇನ್ನು ಬಿಗ್ ಬಾಸ್ ಬರಿ ನಾಟಕ. ಅದರಲ್ಲಿ ಪ್ರಥಮ್ ಅಭಿನಯ ಅತಿರೇಕದಿಂದ ಕೂಡಿದೆ.

—ಎ. ಶಾರದ, ಕೊಟ್ಟೂರು

## ಶಾಲೆಗಳಿಗೆ ಅವಮಾನ!

ಮಕ್ಕಳಿಗೆ ಶಾಲೆಯೇ ದೇವಾಲಯ, ಶಿಕ್ಷಕರೇ ದೇವರು. ವಿದ್ಯಾರ್ಥಿಯಾಗಿ ಎಲ್ಲಿಯೂ 'ಗಂಗಾ' ಶಾಲೆ ಹಾಗೂ ಶಿಕ್ಷಕರನ್ನು ನೋಡಲೇ ಇಲ್ಲ. ಸ್ವತಃ ನಾನು ಶಿಕ್ಷಕಿಯಾಗಿ ಶಾಲೆಗಳನ್ನು ನೋಡಿದರೆ ಎಲ್ಲಿಯೂ ಇಂತಹ ಶಾಲೆ ಕಾಣಿಸಲೇ ಇಲ್ಲ. ಮಗಳನ್ನು ಆಂಗ್ಲ ಮಾಧ್ಯಮದ ಶಾಲೆಯಲ್ಲಿ ಓದಿಸಿದೆ. ಅವಳಿಂದಲೂ ಇಂತಹ ದೂರುಗಳು ಬರಲಿಲ್ಲ. ಆದರೆ... ಪಾಪ! 'ಸ್ವಪ್ನ ಕೃಷ್ಣ'ರವರು ತರಗತಿಯಲ್ಲಿ ಬಾಳೆಹಣ್ಣು ತಿನ್ನುತ್ತಿರುವ ಶಿಕ್ಷಕಿಯನ್ನು ನೋಡುತ್ತಾ ತಾವು ಬೀನ್ಸ್ ಬಿಡಿಸುತ್ತಾ ಬುದ್ಧಿವಂತರಾಗಿ 'ಗಂಗಾ'ಳಂತಹ ಧಾರಾವಾಹಿಯ ನಿರ್ದೇಶನ ಮಾಡಿರುವುದು ಜಗತ್ತಿನ 8ನೇ ಅದ್ಭುತವಾಗಿದೆ! ಈ ದೃಶ್ಯದಿಂದ ಶಿಕ್ಷಕರಿಗೂ ಮತ್ತು ನಮ್ಮ ಶಾಲೆಗಳಿಗೂ ಬಹಳ ಅವಮಾನವಾಗಿದೆ!

—ಹೊಸೂರು ಸುಶೀಲಾ ಬಸವಯ್ಯ, ನೆಲಮಂಗಲ

**ವಾರದ ಪತ್ರ**

## ಮಂತ್ರವಾದಿಗಳು ಬೇಕಾಗಿದ್ದಾರೆ!

ಸರ್ಕಾರ ಹಾಗೂ ವಿಚಾರವಾದಿಗಳು ಮೌಢ್ಯ ನಿವಾರಣಾ ಕಾಯ್ದೆಯನ್ನು ಜಾರಿಗೆ ತರಬೇಕೆಂದು ಬೊಂಬಡಾ ಬಜಾಯಿಸುತ್ತಿರುವಾಗ ನಮ್ಮ ವಾಹಿನಿಗಳು ಸ್ಪರ್ಧೆಗಿಳಿದಂತೆ ವೀಕ್ಷಕರನ್ನು ಮೌಢ್ಯದ ಪ್ರಪಾತಕ್ಕೆ ತಳ್ಳುತ್ತಿವೆ.

ಈಗಾಗಲೇ ಅಡಗೂಲಜ್ಜಿ ಕಾಲದ ಅವಾಸ್ತವಿಕ ನಿರೂಪಣೆಯ 'ನಾಗಿಣಿ', 'ಮಹಾದೇವಿ', 'ದುರ್ಗಾ' ಮತ್ತಿತರ ಧಾರಾವಾಹಿಗಳು ತಲೆ ಹಾಳು ಮಾಡಿವೆ. ಇತ್ತೀಚೆಗೆ ಹೊಸ ಟ್ರೆಂಡ್ ಎಂಬಂತೆ 'ಲಕ್ಷ್ಮಿಬಾರಮ್ಮ', 'ಅಂಜಲಿ'ಗಳಲ್ಲಿ ಭೂತದ ಪ್ರವೇಶವಾಗಿದೆ. ಅದರ ಬೆನ್ನಿಗೆ 'ನೀಲಿ' 'ಮಹಾನದಿ'ಗಳಲ್ಲಿಯೂ ಭೂತಗಳ ಕೈಚಳಕ! ಶೀಘ್ರ ಆರಂಭವಾಗಲಿರುವ 'ಸಪ್ತ ಮಾತೃಕೆ'ಯಲ್ಲಿ ದೊಡ್ಡ ಭೂತ ಬರಬಹುದು.  'ಅಗ್ನಿಸಾಕ್ಷಿ'ಯಲ್ಲಿ ಸತ್ತ ಗೌತಮ್ ಭೂತವಾಗಿ ಎದ್ದು ಬಂದು ಕಾಡುವ ಸಂಭವವಿದೆ! !.

ಈ ಭಯಾನಕ ಧಾರಾವಾಹಿಗಳು ಯಾವ ಸೌಭಾಗ್ಯಕ್ಕಾಗಿ? ವೀಕ್ಷಕರನ್ನು ಹಲವು ಶತಮಾನ ಹಿಂದುಳಿಸಿ ಮಕ್ಕಳು, ಒಬ್ಬಂಟಿ ಮಹಿಳೆಯರಿಗೆ ಮರ್ಮಾಘಾತ ಉಂಟು ಮಾಡುವ ಈ ಧಾರಾವಾಹಿಗಳನ್ನು ನಿಷೇಧಿಸಬಾರದೇಕೆ? ನಿತ್ಯ ಸಂಜೆ 6ರ ನಂತರ 'ಭೂತ ವಾಹಿನಿ'ಗಳಿಂದ ಹೊರಬರುವ ಪ್ರೇತಗಳನ್ನು ನೋಡುವ ವೀಕ್ಷಕರು ಎರಡೂ ಕೈಗಳಲ್ಲಿ ಮಂತ್ರಿಸಿದ ನಿಂಬೆಹಣ್ಣು ಹಿಡಿದು ಕುಳಿತುಕೊಳ್ಳಬೇಕಾಗಬಹುದು!

ಕೆ.ಶ್ರೀನಿವಾಸರಾವ್, ಹರಪನಹಳ್ಳಿ

## ಸತಿಯ ಅಳು

ಉದಯ ಟಿವಿಯ 'ಮಹಾಸತಿ' ಧಾರಾವಾಹಿಯಲ್ಲಿ ಆರತಿ ಅಳುವುದೇ ಆಯಿತು. ಹೀಗೆ ಅತ್ತರೆ ಮೇಕಪ್ ಹೋಗುವುದಿಲ್ಲವೇನು?

—ಎಸ್ಸೆಸ್ಕೆ, ಕಡೂರು

## ಒಳ್ಳೆಯ ಖಳನಾಯಕ

'ಗಂಗಾ' ಧಾರಾವಾಹಿಯಲ್ಲಿ ಅಜ್ಜಮ್ಮನ ಮನೆಯಲ್ಲಿ ವಕ್ಕರಿಸಿರುವ ವಜ್ರಮುನಿಯಂತೆ ಅಭಿನಯಿಸುತ್ತಿರುವ ಪಾತ್ರ ಸೊಗಸಾಗಿ ಮೂಡಿಬಂದಿದೆ. ಕಣ್ಣಲ್ಲೇ ಕ್ರೋಧ ತೋರುತ್ತ, ವಿಭಿನ್ನ ರೀತಿಯ ವಿಲನ್ ಆಗಿ ಮಿಂಚುತ್ತಿದ್ದಾರೆ. ಸೀರೆ ಉಡುವುದೆಂದರೆ ಅಲರ್ಜಿ. ಅಂತಹದರಲ್ಲಿ ಕಚ್ಚೆ ಸೀರೆ ಉಟ್ಟು ನಟಿಸುತ್ತಿರುವ ನಂದಿನಿ ಅಭಿನಯ ಸೊಗಸಾಗಿದೆ. ಗಂಗಾಳ ಬಿಳಿ ಉಡುಗೆ, ಅಜ್ಜಮ್ಮನ ಉಡುಗೆ ಸಂಪ್ರದಾಯ ಸಾರಿದೆ. ಕಾಲ ಕೆಟ್ಟರೂ ಆಚಾರ ಕೆಟ್ಟಿಲ್ಲ ಎನ್ನುವ ಸಂದೇಶ ಇದೆ. ಮಹಾನದಿಯಲ್ಲಿ ಕ.ಪಿ. (ಕನ್ಯಾಪಿತೃ) ಬವಣೆ ಇದೆ. ಅಂಚೆ ನೌಕರ ನರಸಿಂಹಮೂರ್ತಿ ಎರಡು ಕಣ್ಣುಗಳಂತಿರುವ, ಪಟಾಕಿಯಂತೆ ಸಿಡಿಯುವ ಇಬ್ಬರು ಹೆಣ್ಣು ಮಕ್ಕಳ ಮದುವೆಗಾಗಿ ಕಿಡ್ನಿ ಮಾರ ಹೊರಟಿದ್ದಾರೆ.

—ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ

## ಪುನರಾವರ್ತನೆ

'ಚಂದನ'ದಲ್ಲಿ ಪ್ರಸಾರವಾಗುವ ಸಿನಿಮಾಗಳು ಪದೇ ಪದೇ ಅವೇ ಪುನರಾವರ್ತನೆಯಾಗುತ್ತಿವೆ. ಅದೇ 'ಮುಸ್ಸಂಜೆ', 'ಮೊಗ್ಗಿನ ಜಡೆ', 'ದಾಟು' ಇನ್ನೂ ಮುಂತಾದವು ಇನ್ನೂ ಕೆಲವು ಸಲ ಬರೀ ಸಿನಿಮಾ ಎಂದು ತೋರಿಸಿ ಹೆಸರು ಕೂಡ ತೋರಿಸುವುದಿಲ್ಲ. ನಮ್ಮ ಕನ್ನಡ ಚಲನಚಿತ್ರಗಳಲ್ಲಿ ಅನೇಕ ಸಿನಿಮಾಗಳು ರಾಜ್ಯ ಪ್ರಶಸ್ತಿ ಮತ್ತು ರಾಷ್ಟ್ರ ಪ್ರಶಸ್ತಿಗಳನ್ನು ಪಡೆದಿವೆ, ಏಕೆ ಅಂತಹ ಒಳ್ಳೆಯ ಸಿನಿಮಾಗಳನ್ನು ಪ್ರಸಾರ ಮಾಡಬಾರದೆ?

—ಬಿ.ಎನ್. ಚಂದ್ರಪ್ರಭಾ ಪಾಳೇಗಾರ್, ಬೆಂಗಳೂರು

## ಕುತೂಹಲದ ಕಾರ್ಯಕ್ರಮ

'ಸ್ಟಾರ್ ಸುವರ್ಣ'ದ ಕುತೂಹಲಕಾರಿ ಕಾರ್ಯಕ್ರಮ, 'ಹುಷಾರ್ ಕರ್ನಾಟಕ', ಚೆನ್ನಾಗಿದೆ. ಅಪರಾಧಿಗಳು ಹೆಣೆಯುವ ತಂತ್ರಗಳಿಗೆ, ಪ್ರತಿ ತಂತ್ರವನ್ನು ಬಳಸಿ, ನಿಜವಾದ ಅಪರಾಧಿಗಳನ್ನು ಬಯಲಿಗೆಳೆಯುವ ಚಾಕಚಕ್ಯತೆ ನೋಡುಗರ ಕುತೋಹಲವನ್ನು ಹೆಚ್ಚಿಸುತ್ತಿದೆ.

—ಸುಂದರ್, ಬೆಂಗಳೂರು

## ಗುಟ್ಟು ಉಳಿಯಲ್ಲ!

ಝೀ ಕನ್ನಡದಲ್ಲಿ ಸಂಜೆ 7 ಗಂಟೆಗೆ ಪ್ರಸಾರವಾಗುವ 'ಮಹಾನದಿ' ಕಥೆಯೇನೋ ಚೆನ್ನಾಗಿದೆ. ಆದರೆ ಎಂಎಲ್ಎ ಸಾಹೇಬರು ಪದೇ ಪದೇ ಕೊಲೆಗಳನ್ನು ಮಾಡುವುದು ಸಮಂಜಸವಲ್ಲ. ಕೊಲೆಗಳ ಪೂರ್ತಿ ವಿವರಗಳು ವೀಕ್ಷಕರಿಗೆ ಗೌಪ್ಯವಾಗಿದ್ದರೂ ತನ್ನ ಆಪ್ತ ಕಾರ್ಯದರ್ಶಿಯೊಡನೆ ಕಾರಿನಲ್ಲಿ (ಕಾರ್–ಡ್ರೈವರ್ ಮುಂದೆಯೇ– ಬರೀ ಕೈ ಮಾತ್ರ ತೋರಿಸುತ್ತಾರೆ) ರಹಸ್ಯಗಳನ್ನು ಬಿಚ್ಚಿಡುವುದು ಸರಿಯೇ?

—ಸಿ.ಎಸ್. ಶ್ಯಾನ್‌ಭೋಗ್, ಮೈಸೂರು

## ಮನೆ ದೆವ್ವಗಳು

ರಾತ್ರಿ 10.30ಕ್ಕೆ ಈಟಿವಿಯಲ್ಲಿ ಪ್ರಸಾರವಾಗುತ್ತಿರುವ 'ಮನೆ ದೇವ್ರು' ಎಂಬ ಧಾರಾವಾಹಿಗೆ ಅದೇಕೆ ಆ ಹೆಸರು ಇಟ್ಟಿದ್ದಾರೋ ಗೊತ್ತಿಲ್ಲ. ಏಕೆಂದರೆ ಜಯರಾಮ ಮತ್ತು ಆತನ ತಮ್ಮ ರಾಮ ತಮ್ಮ ಜೀವನದ ಮಹಾ ಸಾಧನೆ ಎಂಬಂತೆ ಒಬ್ಬ ಅಳುಮುಂಜಿ ಜಾನಕಿಯನ್ನು ಕೊಲ್ಲಲು ಕೈಯಲ್ಲಿ ರಿವಾಲ್ವಾರ್ ಹಿಡಿದುಕೊಂಡೇ ತಿರುಗುತ್ತಾರೆ. ಈ ದುಷ್ಟದ್ವಯರ ಅಟ್ಟಹಾಸ ಪ್ರಸ್ತುತ ನಾಗರಿಕ ಪ್ರಪಂಚದಲ್ಲಿ ಅಸಂಭವವೇ ಸರಿ. ನಮ್ಮ ಸಂವಿಧಾನ, ಹೆಣ್ಣಿಗಿರುವ ಕಾನೂನು ರಕ್ಷಣೆಯ ಅರಿವಿಲ್ಲದ ನಿರ್ದೇಶಕರು ಅಸಂಬದ್ಧ ತಿರುವುಗಳನ್ನು ಕೊಡುತ್ತಿದ್ದಾರೆ.

—ಎಸ್. ಶಿವಲಿಂಗೇಗೌಡ, ಬೆಂಗಳೂರು